## ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಗುಬ್ಬಿ

ಓ.ಎಸ್. ನಂಬರು.231/2017

ವಾದಿ: ಕೆಂಪಸಿದ್ದಯ್ಯ

ವಿರುದ್ಧ

ಪ್ರತಿವಾದಿಗಳು: ಜಯಮ್ಮ ಮತ್ತು ಇತರರು

ಪ್ರತಿವಾದಿಗಳ ಪರ ಸಾಕ್ಷಿದಾರನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ

ಹೆಸರು: ಚಿಕ್ಕನರಸಿಂಹಯ್ಯ

ತಂದೆಯ ಹೆಸರು: ಲೇ.ಉಗ್ರಪ್ಪ

ವಯಸ್ಸು: 73 ವರ್ಷ

ಉದ್ಯೋಗ: ವ್ಯವಸಾಯ

ವಿಳಾಸ: ಸಣಬನಹಳ್ಳಿ,

ಚೇಳೂರು ಹೋಬಳಿ, ಗುಬ್ಬಿ ತಾಲ್ಲೂಕು.

30/6/2024

ಆದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಸತ್ಯವಾಗಿ ಹೇಳುವುದೇನೆಂದರೆ:-

ನಾನು ಈ ಕೇಸಿನಲ್ಲಿ ಪ್ರತಿವಾದಿಗಳ ಪರ ಸಾಕ್ಷಿದಾರನಿದ್ದೇನೆ. ನನಗೆ ವಾದಿ ಮತ್ತು ಪ್ರತಿವಾದಿಗಳು ಗೊತ್ತಿದ್ದಾರೆ. ದಾವಾ ಸ್ವತ್ತನ್ನು ನೋಡಿರುತ್ತೇನೆ. ದಾವಾ ಸ್ವತ್ತು ಗುಬ್ಬಿ ತಾಲ್ಲೂಕು, ಚೇಳೂರು ಹೋಬಳಿ, ಸಣಬನಹಳ್ಳಿ ಗ್ರಾಮದ ಸರ್ವೆ ನಂ.39 ರಲ್ಲಿ 3-36 ಗುಂಟೆ ಜಮೀನು ಇದ್ದು, ಸದರಿ ಸ್ವತ್ತು ಲಕ್ಕಮ್ಮ ಮತ್ತು ದೊಡ್ಡನರಸಯ್ಯರಿಗೆ ಸೇರಿದ್ದಾಗಿರುತ್ತದೆ. ಲಕ್ಕಮ್ಮ ಮತ್ತು ದೊಡ್ಡನರಸಯ್ಯ ಹಾಗೂ ಆತನ ಕುಟುಂಬದವರು ಸುಮಾರು 60-70 ವರ್ಷಗಳ ಹಿಂದೆ ಕೊಂಡುಕೊಂಡಿದ್ದು, ಅಂದಿನಿಂದ ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದುಕೊಂಡು ಬಂದಿರುತ್ತಾರೆ ಹಾಗೂ ದಾವಾ ಸ್ವತ್ತಿನಲ್ಲಿ ತೆಂಗು ಹಾಗೂ ಮಾವು ಹಾಗೂ ಇತರೆ ಬೆಳೆಗಳನ್ನು ಬೆಳೆಸಿದ್ದು, ದಾವಾ ಸ್ವತ್ತಿನಲ್ಲಿರುವ ಮನೆಯಲ್ಲಿಯೇ ವಾಸವಾಗಿದ್ದುಕೊಂಡು ಕ್ರಮಬದ್ಧವಾಗಿ ಬೆಳೆಗಳನ್ನು ಬೆಳೆದುಕೊಂಡು ವ್ಯವಸಾಯ ಮಾಡುತ್ತಿರುತ್ತಾರೆ. ಲಕ್ಕಮ್ಮ ಮತ್ತು ದೊಡ್ಡನರಸಯ್ಯರವರ ಮರಣಾ ನಂತರ ಇವರ ವಾರಸುದಾರರಾದ ಪ್ರತಿವಾದಿಗಳಾದ

ಚಿಕ್ಕನರಸಿಂಹಯ್ಯ

NOTARY GOVT. OF INDIA T.S. MAHANTHESH B.A., LL.B. Area: Throughout Tumkuru Dist. Karnataka Reg. No. 19870 Expiry on 06-03-2029

ಜಯಮ್ಮ ಮತ್ತು ಇತರರು ಸ್ವಾಧೀನಾನುಭವ ಹೊಂದಿ ಅನುಭವಿಸುತ್ತಾ ಬರುತ್ತಿದ್ದಾರೆ. ಸದರಿ ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳ ವಂಶಸ್ಥರಾದ ಲಕ್ಕಮ್ಮ, ದೊಡ್ಡನರಸಯ್ಯ, ಕೊಲ್ಲಾರಯ್ಯ, ರಾಮಚಂದ್ರ ಹಾಗೂ ಇತರರನ್ನು ಸ್ವಲ್ಪ ಸ್ವಲ್ಪ ದೂರದಲ್ಲಿ ಸಮಾಧಿ ಮಾಡಿರುತ್ತಾರೆ. ಸದರಿ ದಾವಾ ಸ್ವತ್ತಿನಲ್ಲಿ ವಾದಿಯಾಗಲೀ, ಆತನ ತಂದೆ ಅಥವಾ ಆತನ ಕುಟುಂಬಸ್ಥರಾಗಲೀ ಸ್ವಾಧೀನಾನುಭವದಲ್ಲಿ ಇರುವುದಿಲ್ಲ.

ನಾನು ಹಾಲಿ ಸ್ವತ್ತಿಗೆ ಲಗತ್ತಾದ Sy-no-38೦ ಜಮೀನು ಹೊಂದಿರುತ್ತೇನೆ.

ನಾನು ಅದೇ ಗ್ರಾಮದವನಾಗಿದ್ದು, ನನಗೆ ಈ ಎಲ್ಲಾ ಮಾಹಿತಿ ಚೆನ್ನಾಗಿ ತಿಳಿದಿರುತ್ತದೆ.

ಈ ನನ್ನ ಪ್ರಮಾಣಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿರುತ್ತವೆ ಎಂದು ದೇವರ ಹೆಸರಿನಲ್ಲಿ ಪ್ರಮಾಣೀಕರಿಸಿ ಈ ಕೆಳಗೆ ಸಹಿ ಮಾಡಿರುತ್ತೇನೆ.

ಗುರುತುಬಲ್ಲವರು,

Hanumanthappa N.B

ವಕೀಲರು:

ಗುಬ್ಬಿ:

ದಿನಾಂಕ: 30/6/2026

ಚಿಕ್ಕನರಸಿಂಹಯ್ಯ

ಪ್ರಮಾಣಕರ್ತ

SWORN TO BEFORE ME

T.S. MAHANTHESH, B.A., LL.B.,
Advocate And Notary
GOVT. OF INDIA
Regd. No. 19870
GUBBI TALUK & TOWN,
Tumkuru Dist, Karnataka-572 216

NOTARY GOVT. OF INDIA
T.S. MAHANTHESH B.A., LL.B.
Area: Throughout Tumkuru Dist, Karnataka
Reg No. 19870

No. OF CORRECTIONS... 1